**ಓ ಎಸ್ ನಂಃ 754-14**
**ಸಿ ಡಬ್ಲ್ಯೂ ಃ 1**

**ದಿಃ 04-11-2022 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.**

**ವಿಚಾರಣೆಃ** ಪ್ರತಿವಾದಿ ಪರ ಶ್ರೀ ಎಸ್ ಸಿ ಆರ್ ವಕೀಲರಿಂದ

4. ನಾನು 2015-2021 ರವರೆಗೆ ಮಾಗಡಿಯಲ್ಲಿ ಸರ್ವೆಯರ್ ಆಗಿ ಕೆಲಸ ಮಾಡಿರುತ್ತೇನೆ. ನಾನು ಸರ್ವೆ ಆಕಾರ್ ಬಂದ್ ದುರಸ್ತಿ ದಾಖಲೆಗಳನ್ನು ಆಧಾರವಾಗಿಟ್ಟುಕೊಂಡು ಸರ್ವೆ ಮಾಡಿರುತ್ತೇನೆ. ಸದರಿ ದಾಖಲೆಗಳನ್ನು ನಾನು ನನ್ನ ವರದಿಯ ಜೊತೆ ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ. ನಾನು ದಾಖಲೆಗಳನ್ನು ನಮ್ಮ ಕಛೇರಿಯಿಂದ ಪಡೆದಿರುತ್ತೇನೆ. ನಾವು ನಮ್ಮ ಕಛೇರಿಯಿಂದ ದಾಖಲೆಗಳನ್ನು ನಮ್ಮ ಕಛೇರಿಯ ಸೀಲನ್ನು ಪಡೆದುಕೊಂಡು ತೆಗೆದುಕೊಳ್ಳಬೇಕಾಗುತ್ತದೆ ಎಂದರೆ ನಿಜ. ನಾನು ಹಾಜರುಪಡಿಸಿದ ವರದಿಯಲ್ಲಿ ನಾನು ನಮ್ಮ ಕಛೇರಿಯಿಂದ ಪಡೆದುಕೊಂಡಿರುತ್ತೇನೆಂದು ಹೇಳುವ ದಾಖಲೆಗಳು ಇಲ್ಲ ಎಂದರೆ ನಿಜ. ನಾನು ಸರ್ವೆ ನಂ 69 ರ ಮೂಲ ಟಿಪ್ಪಣಿಯನ್ನು ನಮ್ಮ ಕಛೇರಿಯಿಂದ ಪಡೆದು ಸರ್ವೆ ಮಾಡಿಲ್ಲ, ಸಾಕ್ಷಿ ಮುಂದುವರೆದುನಾನು ಆಕಾರ್ ಬಂದ್ ನ ಎಡಬಲ ಪರಿಗಣಿಸಿ ಸರ್ವೆ ಮಾಡಿರುತ್ತೇನೆ ಎಂದು ಹೇಳುತ್ತಾರೆ. ಸರ್ವೆಯನ್ನು ಆಸ್ತಿಯ ಮೂಲ ಟಿಪ್ಪಣಿಯನ್ನು ಆಧಾರವಾಗಿಟ್ಟುಕೊಂಡು ಮಾಡಬೇಕಾಗುತ್ತದೆ ಎಂದರೆ ನಿಜ. ಆಕಾರ್ ಬಂದಿನ ಎಡಬಲವನ್ನು ಮೂಲ ಟಿಪ್ಪಣಿಯನ್ನು ಆಧಾರವಾಗಿಟ್ಟುಕೊಂಡು ಮಾಡುತ್ತಾರೆ ಎಂದರೆ ನಿಜ. ನನಗೆ ಸರ್ವೆ ನಂ 69 ರ ಮೂಲ ಟಿಪ್ಪಣಿಯನ್ನು ಪಡೆಯಲು ತೊಂದರೆ ಇರಲಿಲ್ಲ ಎಂದರೆ ನಿಜ. ಮೂಲ ಟಿಪ್ಪಣಿ ದಾಖಲೆ ಇಲ್ಲದೆ ಒಂದು ಜಮೀನನ್ನು ಅಳತೆ ಮಾಡಿ ಗಡಿಯನ್ನು ಗುರುತಿಸಲು ಆಗುವುದಿಲ್ಲ ಎಂದರೆ ನಿಜ, ಸಾಕ್ಷಿ ಮುಂದುವರೆದು ಜಮೀನು ಪೋಡಿಯಾದಲ್ಲಿ ಜಮೀನಿನ ಅಳತೆ ಇರುತ್ತದೆ ಆ ಅಳತೆಯ ಆಧಾರದ ಮೇಲೆ ಜಮೀನಿನ ಗಡಿಯನ್ನು ಗುರುತಿಸಬಹುದು ಎಂದು ಹೇಳುತ್ತಾರೆ.

5. ನಾವು ಸರ್ವೆ ಮಾಡಲು ಆಧಾರವಾಗಿಟ್ಟುಕೊಳ್ಳುವ ಆಕಾರ್ ಬಂದ್ ಮತ್ತು ಆರ್ ಆರ್ ಪಕ್ಕದ ಎಡಬಲ ದಾಖಲೆಗಳನ್ನು ಮೂಲ ಟಿಪ್ಪಣಿಯೊಂದಿಗೆ ತಾಳೆ ಮಾಡಿ ಪರಿಶೀಲನೆ ಮಾಡಿ ಸರ್ವೆ ಮಾಡುತ್ತೇವೆ ಎಂದರೆ ನಿಜ. ನಾನು ವರದಿಯೊಂದಿಗೆ ಸಲ್ಲಿಸಿದ ದಾಖಲೆಗಳನ್ನು ಸರ್ವೆ ನಂ 69 ರ ಮೂಲ ಟಿಪ್ಪಣಿಗೆ ತಾಳೆ ಮಾಡಿ ಪರಿಶೀಲನೆ ಮಾಡಿಲ್ಲ ಎಂದರೆ ಸರಿಯಲ್ಲ. ನಾನು ಸರ್ವೆ ಮಾಡುವಾಗ ಸರ್ವೆ ನಂ 69 ಎಷ್ಟು ಪೋಡು ಆಗಿದೆ ಪರಿಶೀಲನೆ ಮಾಡಿಲ್ಲ ಆದರೆ ಸರ್ವೆ ಮಾಡುವಾಗ ಸರ್ವೆ ನಂ 69, 69/1, 69/2 ಮತ್ತು 69/3 ಎಂದು ಪೋಡಿಯಾಗಿತ್ತು ಎಂದು ಹೇಳುತ್ತಾರೆ. ಸರ್ವೆ ನಂ 69 ರಲ್ಲಿ ಸರ್ವೆ

ನಂ 69/1, 69/2 ಮತ್ತು 69/3 ಹೊರತುಪಡಿಸಿ ಬೇರೆ ಪೋಡಿಗಳು ಆಗಿರುತ್ತವೆಯಾ ಎಂದರೆ ಇತ್ತೀಚೆಗೆ ಆಗಿರಬಹುದು ನಾನು ಪರಿಶೀಲನೆ ಮಾಡಿಲ್ಲ ಎಂದು ಹೇಳುತ್ತಾರೆ. ಸರ್ವೆ ನಂ 69 ರಲ್ಲಿ ಬೇರೆ ಪೋಡಿಗಳು ನಾನು ಸರ್ವೆ ಮುಗಿಸಿದ ನಂತರ ಆಗಿರುತ್ತವೆ ಎಂದು ನಾನು ಹೇಳುತ್ತೇನೆ. ನಾನು ಸರ್ವೆ ನಂ 69/3 ರ ಗಡಿಯನ್ನು ಆಕಾರ್ ಬಂದ್ ದುರಸ್ತಿ ದಾಖಲೆಗಳ ಆಧಾರದ ಮೇರೆಗೆ ಗುರುತಿಸಿರುತ್ತೇನೆ. ನಾನು ಸರ್ವೆ ಮಾಡಲು ಹೋದಾಗ ಸರ್ವೆ ನಂ 69/3 ಕ್ಕೆ ಗಡಿ ಕಲ್ಲುಗಳು ಇದ್ದವಾ ಎಂದರೆ ಪೂರ್ವ ದಿಕ್ಕಿಗೆ ಗಡಿ ಕಲ್ಲುಗಳು ಇದ್ದವು ಎಂದು ಹೇಳುತ್ತಾರೆ. ಸರ್ವೆ ನಂ 69/3 ರ ಪಶ್ಚಿಮಕ್ಕೆ ಗಡಿ ಕಲ್ಲುಗಳು ಇರಲಿಲ್ಲ ನಾನು ಗುರುತು ಮಾಡಿರುತ್ತೇನೆ. ಈ ವಿಷಯಗಳನ್ನು ನಾನು ಸಲ್ಲಿಸಿದ ವರದಿಯಲ್ಲಿ ಹೇಳಿಲ್ಲ. ಸರ್ವೆ ನಂ 69/3 ರ ಪೂರ್ವಕ್ಕೆ ಎರಡು ಗಡಿ ಕಲ್ಲುಗಳು ಇದ್ದವು. ಪಶ್ಚಿಮಕ್ಕೆ 2 ಗಡಿ ಕಲ್ಲುಗಳು ಇದ್ದವು. ಗಡಿಕಲ್ಲುಗಳನ್ನು ನಮ್ಮ ಕಛೇರಿ ಭಾಷೆಯಲ್ಲಿ ಕುಣಗಳು ಎಂದು ಕರೆಯುತ್ತೇವೆ. ಒಂದು ವೇಳೆ ಒಂದು ಜಮೀನಿಗೆ ಗಡಿ ಕಲ್ಲು ಇಲ್ಲದೇ ಇದ್ದಾಗ ಇದ್ದ ಗಡಿಕಲ್ಲಿನಿಂದ ಅಳತೆ ಮಾಡುತ್ತೇವೆ. ನನ್ನ ವರದಿಯ ಪ್ರಕಾರ ಬಿ ಮತ್ತು ಡಿ ಗಡಿ ಕಲ್ಲುಗಳು ಇದ್ದು ಅದರ ಮೂಲಕ ಜಮೀನನ್ನು ಅಳತೆ ಮಾಡಿರುತ್ತೇನೆ. ಬಿ ಮತ್ತು ಡಿ ಗಡಿ ಕಲ್ಲು ಇತ್ತು ಎಂದು ನಾನು ನನ್ನ ವರದಿಯಲ್ಲಿ ಹೇಳಿಲ್ಲ ಕಾರಣ ಮೆಮೋ ಆಫ್ ಇನ್‌ಸ್ಟ್ರಕ್ಷನ್ ನಲ್ಲಿ ಇರಲಿಲ್ಲ. ನನಗೆ ಕೊಟ್ಟ ಮೆಮೋ ಆಫ್ ಇನ್‌ಸ್ಟ್ರಕ್ಷನ್ ಪ್ರಕಾರ ಒಂದು ವೇಳೆ ಗಡಿ ಕಲ್ಲು ಇಲ್ಲದೇ ಇದ್ದಾಗ, ಇದ್ದ ಗಡಿ ಕಲ್ಲನ್ನು ಆಧಾರವಾಗಿಟ್ಟುಕೊಂಡು ಜಮೀನಿನ ಅಳತೆಯನ್ನು ಮಾಡಿರುತ್ತೇನೆಂದು ನಾನು ವರದಿ ಸಲ್ಲಿಸಬೇಕಾಗಿತ್ತು ಎಂದರೆ ನಿಜ. ನನ್ನ ವರದಿಯ ನಕಾಶೆಯಲ್ಲಿ ತೋರಿಸಿದ ಎಲ್ ಮತ್ತು ಇ ಗಡಿಕಲ್ಲುಗಳು ನಾನು ಸರ್ವೆ ಮಾಡುವ ಸಮಯದಲ್ಲಿ ಇರಲಿಲ್ಲ, ಆದರೆ ನಾನು ಮೂಲ ದಾಖಲೆಗಳ ಅಳತೆಯಂತೆ ಜಮೀನಿನ ಸರ್ವೆ ಮಾಡಿರುತ್ತೇನೆ. ನನ್ನ ವರದಿಯಲ್ಲಿ ತೋರಿಸಿರುವ ಬಿ ಮತ್ತು ಡಿ ಗಡಿ ಕಲ್ಲುಗಳು ಚೌಕಾರದಲ್ಲಿದ್ದು ಅವುಗಳು ಭೂಮಿಯ ಮೇಲಿದ್ದವು ಮತ್ತು ಕಾಣಿಸುತ್ತಿದ್ದವು. ಈ ವಿಷಯವನ್ನು ನನ್ನ ವರದಿಯಲ್ಲಿ ಹೇಳಿಲ್ಲ. ನನ್ನ ವರದಿಯ ನಕಾಶೆ ಪ್ರಕಾರ ಗಡಿಕಲ್ಲುಗಳಾದ ಬಿ ಯಿಂದ ಸಿಗೆ, ಸಿ ಯಿಂದ ಡಿಗೆ, ಡಿ ಯಿಂದ ಇಗೆ ಮತ್ತು ಇ ಯಿಂದ ಎಲ್ ಗೆ ಅಳತೆಯನ್ನು ಗುರುತಿಸಿಲ್ಲ ಎಂದರೆ ನಿಜ. ಒಂದು ವೇಳೆ ಗಡಿಕಲ್ಲುಗಳು ಇಲ್ಲದೇ ಇದ್ದಾಗ ಮೂಲ ದಾಖಲೆಗಳಂತೆ ಅಳತೆ ಮಾಡುತ್ತೇವೆ ಎಂದು ನಾನು ಹೇಳಿದ್ದು ಆ ಮೂಲ ದಾಖಲೆ ಎಂದರೆ ಟಿಪ್ಪಣಿಯಾಗಿರುತ್ತದೆ ಎಂದರೆ ನಿಜ. ನನ್ನ ವರದಿಯ ಪ್ರಕಾರ ಸರ್ವೆ ನಂ 69/3 ಕ್ಕೆ ಯಾವುದೇ ಗಡಿಕಲ್ಲು ಇರಲಿಲ್ಲ ಮತ್ತು ನಾನು ಆ ಜಮೀನಿನ ಸರ್ವೆ ಮಾಡಿಲ್ಲ ಎಂದರೆ ಸರಿಯಲ್ಲ.

6. ನನ್ನ ವರದಿಯಲ್ಲಿ ತೋರಿಸಿದ ನಕಾಶೆಯನ್ನು ನಾನು ನನ್ನ ಕಛೇರಿಯಲ್ಲಿ ತಯಾರಿಸಿರುತ್ತೇನೆ ಎಂದರೆ ನಿಜ. ಸಾಕ್ಷಿ ಮುಂದುವರೆದು ಸ್ಥಳದಲ್ಲಿ ಅಳತೆ ಮಾಡಿದ್ದು ಆ ಅಳತೆಯ ದಾಖಲೆಗಳ ಆಧಾರದ

ಮೇರೆಗೆ ಕಛೇರಿಯಲ್ಲಿ ನನ್ನ ವರದಿಯ ನಕಾಶೆಯನ್ನು ತಯಾರಿಸಿದ್ದೆ ಎಂದು ಹೇಳುತ್ತಾರೆ. ನಾನು ಸ್ಥಳದಲ್ಲಿ ಅಳತೆ ಮಾಡಿರುತ್ತೇನೆ ಎಂದು ಹೇಳುವ ದಾಖಲೆಗಳನ್ನು ನನ್ನ ವರದಿಯ ಜೊತೆ ನ್ಯಾಯಾಲಯದ ಜೊತೆ ಸಲ್ಲಿಸಿಲ್ಲ. ನಿಪಿ6 ನ್ನು ನಾನು ನ್ಯಾಯಾಲಯದಿಂದ ಪಡೆದ ನಂತರ ಅದರ ಒಕ್ಕಣೆಯನ್ನು ಓದಿ ತಿಳಿದುಕೊಂಡಿದ್ದೀರಾ ಎಂದರೆ ಚಕ್ಕುಬಂದಿಯನ್ನು ಓದಿರುತ್ತೇನೆ ಎಂದು ಹೇಳುತ್ತಾರೆ. ನಾನು ನ್ಯಾಯಾಲಯದಿಂದ ಅಳತೆಗಾಗಿ ಪಡೆದ ಕ್ರಯಪತ್ರವೇ ನಿಪಿ 6 ಆಗಿರುತ್ತದೆ ಎಂದರೆ ನಿಜ. ನನ್ನ ವರದಿಯಲ್ಲಿ ತೋರಿಸಿರುವ ನಕಾಶೆಯಂತೆ ಸರ್ವೆ ನಂ 69/2 ಮತ್ತು 69/3 ಕ್ಕೆ ನಿಪಿ 6 ರಂತೆ ಪೂರ್ವಕ್ಕೆ ರಂಗಯ್ಯರವರ ಜಮೀನು ಬರುತ್ತದೆ ಎಂದರೆ ನಿಜ, ಸಾಕ್ಷಿ ಮುಂದುವರೆದು ನನ್ನ ಸರ್ವೆ ವರದಿಯಂತೆ ಸರ್ವೆ ನಂ 69/2 ರ ಪೂರ್ವಕ್ಕೆ ಸರ್ವೆ ನಂ 69/3 ಬರುತ್ತದೆ ಎಂದು ಹೇಳುತ್ತಾರೆ. ನಾನು ಹೇಳುವ ಸರ್ವೆ ನಂ 69/3 ರಲ್ಲಿ ಈ ಮೊದಲು ಚಿಮ್ಮಣಿ, ಮಂಗಳೂರು ಹಂಚಿನ ಕಟ್ಟಡಗಳು ಮತ್ತು ಬಾವಿ ಇತ್ತು ಎಂದರೆ ನಾನು ಅಳತೆ ಮಾಡುವಾಗ ಅವು ಇರಲಿಲ್ಲ ಮೊದಲು ಇರುವ ಬಗ್ಗೆ ಗೊತ್ತಿಲ್ಲ ಎಂದು ಹೇಳುತ್ತಾರೆ.

7. ನಾನು ನನ್ನ ವರದಿಯಲ್ಲಿ ಗುರುತಿಸಿರುವ 20 ಗುಂಟೆ ಜಮೀನು ನಿಪಿ 6 ರಲ್ಲಿ ತೋರಿಸಿರುವ ಚಕ್ಕುಬಂದಿಯಲ್ಲಿ ಬರುತ್ತದೆ ಎಂದರೆ ನಿಜ. ಸಾಕ್ಷಿ ಮುಂದುವರೆದು ಅದು ಈಗ ಬೇರೆಯಾಗಿ ಪೋಡಿಯಾಗಿರುತ್ತದೆ ಮತ್ತು ಕ್ರಯಪತ್ರಕ್ಕೆ ತಾಳೆಯಾಗುವುದಿಲ್ಲ ಎಂದು ಹೇಳುತ್ತಾರೆ. ಒಂದು ಜಮೀನು ಪೋಡಿಯಾದ ನಂತರ ಜಮೀನು ಸ್ಥಳಾಂತರ ಆಗುವುದಿಲ್ಲ ಎಂದರೆ ನಿಜ. ಸದರಿ 69/2 ರಲ್ಲಿ 1 ಎಕರೆ ಹೈನು ಜಮೀನು ಇರುತ್ತದೆ ಮತ್ತು 27 ಗುಂಟೆ ಖರಾಬು ಜಮೀನು ಇರುತ್ತದೆ, ಸದರಿ ಸರ್ವೆ ನಂ 69/3 ರಲ್ಲಿ ತೋರಿಸಿರುವ 20 ಗುಂಟೆ ಜಮೀನನ್ನು ಸೇರಿಸಿದರೆ 1 ಎಕರೆ 20 ಗುಂಟೆ ಜಮೀನು ಆಗುತ್ತದೆ ಎಂದರೆ ನಿಜ. ಸದರಿ 1 ಎಕರೆ 20 ಗುಂಟೆ ಜಮೀನು ಖರಾಬು ಹೊರತುಪಡಿಸಿ ಇರುವ ಜಮೀನು ನಿಪಿ 6 ರಲ್ಲಿ ತೋರಿಸಿರುವ ಚಕ್ಕುಬಂದಿಯಲ್ಲಿ ಬರುತ್ತದೆ ಎಂದರೆ ಗೊತ್ತಿಲ್ಲ. ಸರ್ವೆ ನಂ 69/2 ರಲ್ಲಿ 1 ಎಕರೆ ಹೈನು ಜಮೀನು ಮತ್ತು ಸರ್ವೆ ನಂ 69/3 ರಲ್ಲಿ 20 ಗುಂಟೆ ಜಮೀನು ಒಟ್ಟು 1 ಎಕರೆ 20 ಗುಂಟೆ ಜಮೀನು ನಿಪಿ 6 ರಲ್ಲಿ ತೋರಿಸಿರುವ ಚಕ್ಕುಬಂದಿಯಲ್ಲಿ ಬರುತ್ತದೆ ಎಂದರೆ ನಿಜ, ಸಾಕ್ಷಿ ಮುಂದುವರೆದು ಅವು ಪೋಡು ಆಗಿರುತ್ತವೆ ಎಂದು ಹೇಳುತ್ತಾರೆ. ಮೇಲೆ ಹೇಳಿದ 1 ಎಕರೆ ಮತ್ತು 20 ಗುಂಟೆ ಎರಡು ಜಮೀನು ಒಟ್ಟು 1 ಎಕರೆ 20 ಗುಂಟೆ ಜಮೀನು ಈಗ ಭೂ ಪರಿವರ್ತನೆ ಆಗಿರುತ್ತದೆ ಎಂದರೆ ನಿಜ.

8. ನನ್ನ ವರದಿಯಲ್ಲಿ ತೋರಿಸಿರುವ ಎ ಖರಾಬು ಎಂದರೆ ಭೂ ಪರಿವರ್ತನೆ ಆಗಿದ ಜಮೀನು ಮತ್ತು ಬಿ ಖರಾಬು ಎಂದರೆ ಸರ್ಕಾರಿ ಜಮೀನು ಆಗಿರುತ್ತದೆ. ನನ್ನ ವರದಿಯಂತೆ 1 ಎಕರೆ ಜಮೀನು ಎ ಖರಾಬು ಇದ್ದು 27 ಗುಂಟೆ ಜಮೀನು ಬಿ ಖರಾಬು ಜಮೀನು ಆಗಿರುತ್ತದೆ. ಸರ್ಕಾರಿ ಖರಾಬು ಜಮೀನು ಎಂದರೆ ನನ್ನ ಪ್ರಕಾರ ಅಲ್ಲಿ ಹಳ್ಳ, ರಸ್ತೆ ಮತ್ತು ಬಂಡೆಗಳು ಇರುತ್ತವೆ. 27 ಗುಂಟೆ

ಜಮೀನಿನಲ್ಲಿ ಹಳ್ಳ, ಕಲ್ಲುಬಂಡೆ, ರಸ್ತೆ ನಾನು ಸರ್ವೆ ಮಾಡುವಾಗ ಕಂಡು ಬಂದಿರಲಿಲ್ಲ ಆದರೆ ದಾಖಲೆಗಳ ಪ್ರಕಾರ ಅದು ಬಿ ಖರಾಬು ಎಂದು ಹೇಳುತ್ತಾರೆ. 27 ಗುಂಟೆ ಜಮೀನಿನಲ್ಲಿ ಹಳ್ಳ, ಕಲ್ಲುಬಂಡೆ ಮತ್ತು ರಸ್ತೆ ಇರುವುದಿಲ್ಲ ಆದ ಕಾರಣ 27 ಗುಂಟೆ ಜಮೀನು ಬಿ ಖರಾಬು ಜಮೀನು ಅಲ್ಲ ಅದು ಹಿಡುವಳಿ ಖರಾಬು ಜಮೀನು ಎಂದರೆ ನಮ್ಮ ದಾಖಲೆಗಳ ಪ್ರಕಾರ ಅದು ಬಿ ಖರಾಬು ಜಮೀನು ಆಗಿರುತ್ತದೆ ಎಂದು ಹೇಳುತ್ತಾರೆ. ನನ್ನ ದಾಖಲೆಗಳ ಪ್ರಕಾರ 27 ಗುಂಟೆ ಜಮೀನು ಬಿ ಖರಾಬು ಜಮೀನು ಎಂದು ನನ್ನ ವರದಿಯಲ್ಲಿ ಹೇಳಿಲ್ಲ. ಹಿಡುವಳಿ ಖರಾಬು ಜಮೀನಿನಲ್ಲಿರುವ ಚಿಕ್ಕ ಕಲ್ಲುಮರಟಿಗಳು, ಜೋಗು ಜೋಗು ಕಲ್ಲುಮರಟಿಗಳು ಮತ್ತು ಸವಕಳಿಗಳು ಹಿಡುವಳಿದಾರರಿಗೆ ಸೇರುತ್ತವೆ ಎಂದರೆ ನಿಜ. ಈಗ ನಾನು ಹೇಳಿದ ಹಿಡುವಳಿ ಖರಾಬು ಜಮೀನು ಅದೇ 27 ಗುಂಟೆ ಆಗಿರುತ್ತದೆ ಎಂದರೆ ನಿಜ.

9. 27 ಗುಂಟೆ ಜಮೀನು ಮತ್ತು 1 ಎಕರೆ ಹಾಗೂ 20 ಗುಂಟೆ ಜಮೀನನ್ನು ಹೊರತುಪಡಿಸಿ ಬೇರೆ ಖರಾಬು ಜಮೀನು ಇರುವುದಿಲ್ಲ ಎಂದರೆ ನಿಜ, ಸಾಕ್ಷಿ ಮುಂದುವರೆದು ಸರ್ವೆ ನಂ 69/3 ರಲ್ಲಿ 20 ಗುಂಟೆ ಮತ್ತು 69/2 ರಲ್ಲಿ 1 ಎಕರೆ ಹೈನು ಜಮೀನು ಇರುತ್ತದೆ ಎಂದು ಹೇಳುತ್ತಾರೆ. ಸರ್ವೆ ನಂ 69/3 ವಾದಿಯ ಆಸ್ತಿ ಎಂದು ಯಾವ ಆಧಾರದ ಮೇರೆಗೆ ನನ್ನ ವರದಿಯಲ್ಲಿ ಹೇಳಿರುತ್ತೇನೆ ಎಂದರೆ ಮೆಮೋ ಆಫ್ ಇನ್‌ಸ್ಟ್ರಕ್ಷನ್ ನಲ್ಲಿ ಸರ್ವೆ ನಂ 69/2 ವಾದಿಯ ಆಸ್ತಿ ಎಂದು ಇದ್ದು ಆ ಮೇರೆಗೆ ಹೇಳಿರುತ್ತೇನೆ ಎಂದು ಹೇಳುತ್ತಾರೆ. ನಾನು ನನ್ನ ವರದಿಯಲ್ಲಿ ಕೊಟ್ಟಂತಹ ಕ್ರಮ ಸಂ 1 ರಿಂದ 5, 7 ಮತ್ತು 8 ಉತ್ತರಗಳನ್ನು ವಾದಿಯ ಜೊತೆ ಶಾಮೀಲಾಗಿ ಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ.

10. ಸರ್ವೆ ನಂ 69/2 ಮತ್ತು 69/3 ಬೇರೆ ಬೇರೆ ಜಮೀನುಗಳು ಅಲ್ಲ ಅವುಗಳು ನಿಪಿ 6 ರಲ್ಲಿ ತೋರಿಸಿದ ಚಕ್ಕುಬಂದಿಯಲ್ಲಿ ಬರುತ್ತವೆ ಎಂದರೆ ನಮ್ಮ ಆಕಾರ್ ಬಂದ್ ದಾಖಲೆಗಳ ಪ್ರಕಾರ ಬೇರೆ ಬೇರೆ ಎಂದು ಹೇಳುತ್ತಾರೆ. ವಾಸ್ತವವಾಗಿ ನಾನು ಅಳತೆ ಕಾರ್ಯ ಮಾಡಿದಾಗ ಸರ್ವೆ ನಂ 69/2 ಮತ್ತು 69/3 ನಿಪಿ 6 ರಲ್ಲಿ ತೋರಿಸಿದ ಚಕ್ಕುಬಂದಿಯಲ್ಲಿ ಬರುತ್ತದೆ ಎಂದರೆ ನಿಜ, ಸಾಕ್ಷಿ ಮುಂದುವರೆದು ಆಕಾರ್ ಬಂದ್ ಪ್ರಕಾರ ಅವೆರಡು ಬೇರೆ ಬೇರೆ ಎಂದು ಹೇಳುತ್ತಾರೆ. ನನ್ನ ವರದಿಯಂತೆ ಸ್ಥಳದಲ್ಲಿ ಯಾವುದೇ ಶೆಡ್ ಇರುವುದಿಲ್ಲ ಎಂದರೆ ಸರಿಯಲ್ಲ. ಸರ್ವೆ ನಂ 69/2 ರಲ್ಲಿ ಸರ್ವೆ ನಂ 69/3 ಆಗಿರುತ್ತದೆ ಎಂದರೆ ಪ್ರತ್ಯೇಕವಾಗಿ ಪೋಡಿಯಾಗಿರುತ್ತದೆ ಎಂದು ಹೇಳುತ್ತಾರೆ. ನಾನು ವಾದಿಯ ಪ್ರಶ್ನೆಗಳಿಗೆ ಮೂಲ ಟಿಪ್ಪಣಿಯನ್ನು ಪರಗಣಿಸದೇ ಉತ್ತರಕೊಟ್ಟು ಸುಳ್ಳು ವರದಿ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ.

**ಈ ಹಂತದಲ್ಲಿ ಪಾಟೀ ಸವಾಲು ಮುಂದುವರೆಸಲು ಕಾಲವಕಾಶ ಕೋರಿದ್ದಾರೆ ನೀಡಲಾಗಿದೆ.**

(ಉಖ್ತ ಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಎ ಓ

ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು,
ಮಾಗಡಿ.